SC No.04/2023
CW-38 / PW-22

# ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು

## ಸತ್ರ ಮೊಕದ್ದಮೆ ಸಂಖ್ಯೆ 04/2023

ಚಾ.ಸಾಃ 38 ಪ್ರಾ.ಸಾಃ 22

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 26.02.2026

| | | |
|---|---|---|
| ಸಾಕ್ಷಿಯ ಹೆಸರು | : | ಡಾಃ ಕಾರ್ತಿಕ್ ಎಲ್ |
| ತಂದೆಯ ಹೆಸರು | : | ವಿಜಯಸಾಯಿ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿಗಳು, ರಿಮ್ಸ್ ರಾಯಚೂರು |
| ವಿಳಾಸ | : | ರಾಯಚೂರು |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು ರಾಯಚೂರಿನ ರಿಮ್ಸ್ ಆಸ್ಪತೆಯಲ್ಲಿ ಎಪೀಲ್ 2016 ರಿಂದ ಸಿ.ಎಮ್.ಓ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

02. ದಿನಾಂಕ 26.09.2022 ರಂದು ಚಾಸಾ.12 - ಶಿಲ್ಪಾ ಅಪಘಾತದ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದರು. ಸದರಿ ಗಾಯಾಳುವಿಗೆ ನಾನು ಚಿಕಿತ್ಸೆ ಕೊಟ್ಟಿರುತ್ತೇನೆ. ಈ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ಗುರುತಿಸಿದ ಗಾಯದ ಪ್ರಮಾಣ ಪತ್ರವನ್ನು **ನಿಪಿ.24** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.24(ಎ)** ಎಂದು ಗುರುತಿಸಲಾಯಿತು.

03. ಸದರಿ ಗಾಯಾಳುವಿಗೆ ಹಣೆಯ ಬಲಭಾಗದಲ್ಲಿ ತೆರಚಿದ ಗಾಯ ಮತ್ತು ಬಲಗಣ್ಣಿನ ಕೆಳಗಿನ ಭಾಗದಲ್ಲಿ ತೆರಚಿದ ಗಾಯ ಮತ್ತು ಮೇಲಿನ ತುಟಿ ಬಾಹು ಆಗಿತ್ತು. ಸದರಿ ಗಾಯಗಳು ಸಾಮಾನ್ಯ ಸ್ವರೂಪದ

ಗಾಯಗಳು ಆಗಿದ್ದವು. ಮೋಟಾರ್ ಸೈಕಲ್ ನಿಂದ ಒಬ್ಬ ವ್ಯಕ್ತಿ ಬಿದ್ದರೆ ನಿಪಿ.24 ರಲ್ಲಿ ನಮೂದಿಸಿದ ಗಾಯಗಳು ಆಗಬಹುದು.

**ಆರೋಪಿತರ ಪರ ಶ್ರೀ ಎಸ್.ಪಿ ವಕೀಲರಿಂದ ಪಾಟೀ ಸವಾಲುಃ-**

04. ಸದರಿ ದಿನ ನಾನು ರಿಮ್ಸ್ ಆಸ್ಪತ್ರೆಯಲ್ಲಿ ನಾನು ಸಿ.ಎಮ್.ಓ ಆಗಿದ್ದೆನು. ಸದರಿ ದಿನ ಗಾಯಾಳು ಬಂದ ತಕ್ಷಣ ನಾನು ನೋಡಿದ್ದೇನೆ. ಗಾಯಾಳುವಿನ ಗುರುತಿನ ಚಿಹ್ನೆಗಳನ್ನು ನಿಪಿ.24 ರಲ್ಲಿ ಬರೆದಿಲ್ಲ. ಗಾಯಾಳುವನ್ನು ಆಕೆಯ ತಂದೆ ಮುದುಕಪ್ಪ ಕರೆದುಕೊಂಡು ಬಂದಿದ್ದನು. ನಿಪಿ.24 ರಲ್ಲಿ ನಮೂದಿಸಿದ ಗಾಯಗಳುನ್ನು ಹೊರತು ಪಡಿಸಿ ಬೇರೆ ಗಾಯಗಳು ಸದರಿ ಗಾಯಾಳುವಿಗೆ ಆಗಿರಲಿಲ್ಲ. ಅದೇ ದಿನ ಈ ಕೇಸಿಗೆ ಸಂಬಂಧಪಟ್ಟಂತೆ ಬೇರೆ ಗಾಯಾಳು ಚಿಕಿತ್ಸೆಗೆ ಬಂದಿದ್ದರೋ ಇಲ್ಲವೋ ಹೇಳಲಾಗುವುದಿಲ್ಲ. ಕಿರಣ ಎಂಬ ಇನ್ನೊಬ್ಬ ಗಾಯಾಳು ಅಪಘಾತದ ಹಿನ್ನೆಲೆಯಲ್ಲಿ ಅದೇ ದಿನ ಚಿಕಿತ್ಸೆಗೆ ಬಂದಿದ್ದರು ಎನ್ನುವುದು ನಿಜ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.